ಕಿರಿಯ ಪ್ರಾಥಮಿಕ ಶಾಲೆಯ ಹಳೆಯ ಕಟ್ಟಡ ಹಾಗೂ ಹೊಂದಿಕೊಂಡಿರುವ ನಿವೇಶನವನ್ನು ಹಸ್ತಾಂತರಿಸಲು ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಸರ್ಕಾರ ಅನುಮತಿ ನೀಡಿದ್ದು, ನಿವೇಶನ ಹಸ್ತಾಂತರವಾದ ನಂತರ ಸ್ವಂತ ಕಟ್ಟಡ ನಿರ್ಮಾಣಕ್ಕಾಗಿ ಕ್ರಮಕೈಗೊಳ್ಳಲಾಗುವುದು.

ಪಶು ಆಸ್ಪತ್ರೆ ಕಟ್ಟಡ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 141 (414)

ಸದಸ್ಯರ ಹೆಸರು : ಶ್ರೀ ಸುರೇಶ್‌ಗೌಡ (ನಾಗಮಂಗಲ)

ಉತ್ತರಿಸುವ ಸಚಿವರು : ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಪ್ರಶ್ನೆಗಳು:

ಅ) 2011–12ನೇ ಸಾಲಿನಲ್ಲಿ ಸರ್ಕಾರಿ ಪದವಿಪೂರ್ವ ಕಾಲೇಜುಗಳಿಗೆ, ಕಟ್ಟಡ ನಿರ್ಮಾಣ, ಶೌಚಾಲಯ, ಕಾಂಪೌಂಡ್, ಇತರೆ ಮೂಲಭೂತ ಸೌಕರ್ಯಗಳಿಗೆ ಎಷ್ಟು ಹಣ ಆಯವ್ಯಯದಲ್ಲಿ ನಿಗದಿಪಡಿಸಲಾಗಿದೆ. ಯಾವ ಯಾವ ಕಾಲೇಜುಗಳಿಗೆ ಸೌಲಭ್ಯ ಒದಗಿಸಲು ಹಣ ಬಿಡುಗಡೆ ಮಾಡಲಾಗಿದೆ? (ಪೂರ್ಣ ವಿವರ ಒದಗಿಸುವುದು)

ಉತ್ತರಗಳು:

ಅ) 2011–12ನೇ ಸಾಲಿಗೆ ಸರ್ಕಾರಿ ಪದವಿಪೂರ್ವ ಕಾಲೇಜುಗಳಿಗೆ ಅಪೆಂಡಿಕ್ಸ್–ಇ ಅಡಿ ಅನುಮೋದಿತಗೊಂಡ ಕಟ್ಟಡ ಕಾಮಗಾರಿಗಳ ಬಾಕಿ ಬಾಬ್ತು ಬಿಡುಗಡೆ ಮಾಡಲು 5.00 ಕೋಟಿ ರೂ.ಗಳು. ನಬಾರ್ಡ್ ಅನುದಾನದ ಆರ್.ಐ.ಡಿ.ಎಫ್ ವಿವಿಧ ಹಂತಗಳಲ್ಲಿ ಅನುಮೋದಿತ ಕಟ್ಟಡ ಕಾಮಗಾರಿಗಳಿಗೆ 53.55 ಕೋಟಿ ರೂ. ಗಳು.

ಇತರೆ ಮೂಲಭೂತ ಸೌಲಭ್ಯಕ್ಕಾಗಿ 4.00 ಕೋಟಿ ರೂ.ಗಳು ಹೀಗೆ 62.55 ಕೋಟಿ ರೂ.ಗಳನ್ನು ಒದಗಿಸಲಾಗಿದೆ.

ಇದರಲ್ಲಿ ಈಗಾಗಲೇ ಒಟ್ಟು 46.91 ಕೋಟಿ ರೂ.ಗಳ ಅನುದಾನವನ್ನು ಮೂರು ಕಂತುಗಳಲ್ಲಿ ಬಿಡುಗಡೆ ಮಾಡಲಾಗಿದೆ. ವಿವರವನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ಪುಂಜಾಲಕಟ್ಟೆ ಪ್ರಥಮದರ್ಜೆ ಕಾಲೇಜಿನ ಕುರಿತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 142 (122)

ಸದಸ್ಯರ ಹೆಸರು : ಶ್ರೀ ವಸಂತ ಬಂಗೇರ ಕೆ. (ಬೆಳ್ತಂಗಡಿ)

ಉತ್ತರಿಸುವ ಸಚಿವರು : ಡಾ. ವಿ.ಎಸ್.ಆಚಾರ್ಯ (ಮಾನ್ಯ ಉನ್ನತ ಶಿಕ್ಷಣ ಸಚಿವರು)

ಪ್ರಶ್ನೆಗಳು:

ಅ) ಬೆಳ್ತಂಗಡಿ ತಾಲ್ಲೂಕಿನ ಪುಂಜಾಲಕಟ್ಟೆ ಪ್ರಥಮ ದರ್ಜೆ ಕಾಲೇಜು ಯಾವಾಗ ಆರಂಭಗೊಂಡಿತು.

ಆ) ಸದರಿ ಕಾಲೇಜಿನಲ್ಲಿರುವ ವಿದ್ಯಾರ್ಥಿಗಳ ಮತ್ತು ಬೋಧಕ ಸಿಬ್ಬಂದಿಗಳ ಸಂಖ್ಯೆ ಎಷ್ಟು;

ಇ) ಎಷ್ಟು ಬೋಧಕ ಸಿಬ್ಬಂದಿ ಹುದ್ದೆಗಳು ಖಾಲಿ ಇರುತ್ತವೆ;

ಈ) ತರಗತಿಗಳನ್ನು ಎಲ್ಲಿ ನಡೆಸಲಾಗುತ್ತದೆ;

ಉ) ಸ್ವಂತ ಕಟ್ಟಡ ಮತ್ತು ಮೂಲಭೂತ ಸೌಕರ್ಯಗಳು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿರುವುದೇ?

ಊ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಉತ್ತರಗಳು:

ಅ) 2007–08

ಆ) 1. ವಿದ್ಯಾರ್ಥಿಗಳು ಸಂಖ್ಯೆ – 340

2. ಬೋಧಕ ಸಿಬ್ಬಂದಿಗಳ ಸಂಖ್ಯೆ – 13